ಪಕ್ಕದಲ್ಲಿದ್ದರೂ, ಕಾಲ ಕಳೆಯುವುದು ಕಷ್ಟವೆಂದು ಹೇಳುತ್ತಿದ್ದೀಯಾ. ಹೀಗೆ ಹೇಳುವ ಮೂಲಕ ನೀನು ನನ್ನನ್ನು ಅವಮಾನಿಸುತ್ತಿದ್ದೀಯ. ಪ್ರತಿದಿನ ನಾನು ನೀರಿನಲ್ಲಿ ನನ್ನ ರೂಪವನ್ನು ನೋಡಿಕೊಳ್ಳುತ್ತೇನೆ. ನಾವು ಮದುವೆಯಾದ ಸಮಯದಿಂದ ನನ್ನ ಮುಖ ಇನ್ನೂ ಹೆಚ್ಚು ಸುಂದರವಾಗಿ ಕಾಣಿಸುತ್ತಿದೆ. ನಾನು ನನ್ನ ಗೆಳೆಯರನ್ನು ಸಂಪರ್ಕಿಸಿದೆ. ಅವರೂ ಸಹ ಒಪ್ಪಿಕೊಳ್ಳುತ್ತಾರೆ, ಮೊದಲಿಗಿಂತ ನಾನು ಹೆಚ್ಚು ಸುಂದರವಾಗಿ ಕಾಣಿಸುತ್ತೇನೆ ಎಂದು. ಅಂತಹದರಲ್ಲಿ ನೀನು ನನ್ನಿಂದ ಏಕೆ ದೂರ ಹೋಗುತ್ತಿ ಎಂದು ತಿಳಿಯುತ್ತಿಲ್ಲ?' 'ನೀನು ಮೊದಲಿಗಿಂತ ಹೆಚ್ಚು ಸುಂದರ ಎಂದು ಯಾರು ಹೇಳಿದರು? ನಿನ್ನ ಗರ್ಲ್ ಫ್ರೆಂಡ್‌ಗಳೇ? ಅಥವಾ ನಿನ್ನ ಬಾಯ್ ಫ್ರೆಂಡ್‌ಗಳೇ?' ಎಂದು ಕಾಗೆ ಹೇಳಿತು. 'ಹಾಗೆ ಹೇಳಿದ್ದು ನನ್ನ ನೆಚ್ಚಿನ ಗೆಳತಿಯರೇ. ನನಗೆ ಯಾವ ಬಾಯ್ ಫ್ರೆಂಡುಗಳಿಲ್ಲ.' ಕಾಗೆಯ ಹೆಂಡತಿ ಉತ್ತರಿಸಿತು. ಆ ಕಾಗೆ ತನ್ನ ರೆಕ್ಕೆಗಳನ್ನು ಬಡಿಯುವ ಮೂಲಕ ಪ್ರತಿಕ್ರಿಯೆ ನೀಡಿತು. ಮರದ ರೆಂಬೆಯಿಂದ ಹೊರಟು ದಕ್ಷಿಣದ ಕಡೆ ಹಾರತೊಡಗಿತು. 'ಕಾ...ಕಾ..' ಅದರ ಹಿಂದಿನಿಂದ ಕಾಗೆ ಹಾರುವ ಸದ್ದು ಕೇಳಿತು. ತಲೆ ಸರಿಸಿ ನೋಡಿದಾಗ ತನ್ನ ಹೆಂಡತಿಯೇ ಎಂದು ಗೊತ್ತಾಯಿತು. 'ನನ್ನನ್ನು ಏಕೆ ಹಿಂಬಾಲಿಸುತ್ತಿದ್ದೀಯೇ?' 'ನಿನಗೆ ಆರೋಗ್ಯ ಸರಿಯಿಲ್ಲ... ಆದರೂ ನೀನು ಒಂಟಿಯಾಗಿ ಹೋಗುತ್ತಿದ್ದೀಯೇ. ತಲೆ ತಿರುಗಿದರೆ, ನೀನು ಬೀಳಬಹುದು. ನಾನು ನಿನ್ನೊಂದಿಗೆ ಇದ್ದರೆ, ನೀನು ಬೀಳುವುದನ್ನು ನಾನು ಸರಿಯಾದ ಸಮಯಕ್ಕೆ ತಡೆಯಬಲ್ಲೆ. ಅದಕ್ಕೇ ನಾನು ನಿನ್ನನ್ನು ಹಿಂಬಾಲಿಸುತ್ತಿದ್ದೇನೆ.' 'ಓ... ಹಾಗೋ! ನೀನು ನನ್ನನ್ನು ಕಾಪಾಡಲು ಇಲ್ಲಿದ್ದೀಯ, ಅಲ್ಲವೇ?' ಕಾಗೆ ಕೇಳಿತು. 'ಹೌದು!' ಹೆಂಡತಿ ಹೇಳಿದಳು. 'ಹಾಗಿದ್ದರೆ, ನೀನು ನನ್ನ ಜೊತೆ ಬರಬೇಕಿಲ್ಲ. ನಾನು ಈಗ ಚೆನ್ನಾಗಿಯೇ ಇದ್ದೇನೆ. ನನ್ನೆಲ್ಲಾ ತೊಂದರೆಗಳು ಹೊರಟು ಹೋಯಿತು. ನನಗೆ ತಲೆ ತಿರುಗುವುದೂ ಇಲ್ಲ, ಭೂಮಿಗೆ ಬೀಳುವುದೂ ಇಲ್ಲ, ನರಿಗೆ ಆಹಾರವಾಗುವುದೂ ಇಲ್ಲ. ಹಾಗಾಗಿ, ನೀನು ನನಗೆ ಬೆಂಗಾವಲು ಆಗಬೇಕಿಲ್ಲ. ದಯಮಾಡಿ ಮನೆಯಲ್ಲೇ ಇರು.'



'ನೀನು ಎಲ್ಲಿಗೆ ಹೋಗುತ್ತಿದ್ದೀಯಾ?' 'ಇಲ್ಲೇ ಹತ್ತಿರದಲ್ಲಿ... ವಿಕ್ರಮಸಿಂಗಾಪುರಂಗೆ.' 'ಓ...! ವಿಕ್ರಮ ಸಿಂಗಾಪುರಂ ಗಾ? ಅದು ಪಾಪನಾಶಂ ಹತ್ತಿರವಿದೆ. ತುಂಬಾ ದೂರ.' 'ಆದರೆ, ನಾನು ಆ ದೂರವನ್ನು ಒಂದು ನಿಮಿಷದಲ್ಲಿ ಹಾರಬಲ್ಲೆ. ಅದರ ಬಗ್ಗೆ ನಿನಗೆ ಚಿಂತೆ ಬೇಡ. ಈಗ ಮನೆಗೆ ಹೋಗು' ಕಾಗೆ ತಿಳಿಯಹೇಳಿತು. 'ನೀನೇಕೆ ಅಲ್ಲಿಗೆ